# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ/346/2018/ಎಆರ್‌ಇ-8

ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ:26.07.2022.

## :: ವಿಚಾರಣಾ ವರದಿ ::

**ಉಪಸ್ಥಿತರು:** ರಾಜಶೇಖರ.ವಿ.ಪಾಟೀಲ
ಅಪರ ನಿಬಂಧಕರು ವಿಚಾರಣೆಗಳು-8,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:** ಶ್ರೀ.ವಿಜಯಣ್ಣ, ತಹಶೀಲ್ದಾರ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**

1.ಕಂಪ್ಲೇಂಟ್/ಉಪಲೋಕ್/ಬಿಡಿ/427/2017/ಡಿಆರ್‌ಇ-4
ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 12.01.2018.

2.ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 41 ಎಡಿಇ 2018
ಬೆಂಗಳೂರು, ದಿನಾಂಕ:22.03.2018

3.ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ-346/2018
ಬೆಂಗಳೂರು, ದಿನಾಂಕ:13.07.2018

*****

1. ಪ್ರಸ್ತುತ ದೂರನ್ನು ದೂರುದಾರರಾದ ಶ್ರೀ.ಎಂ.ಮಂಜುನಾಥ ಬಿನ್ ಮುನಿಯಪ್ಪ, 2ನೇ ಕ್ರಾಸ್, ಕಾರಂಜಿಕಟ್ಟೆ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ರವರು ಆಸನೌ ಶ್ರೀ.ಎಂ.ವಿಜಯಣ್ಣ, ತಹಶೀಲ್ದಾರರು, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಸಲ್ಲಿಸಿರುತ್ತಾರೆ.
2. ದೂರುದಾರರಾದ ಆಸನೌ ರವರು ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ತಹಶೀಲ್ದಾರ ಕಾರ್ಯಾಲಯಕ್ಕೆ ಸೇರಿದ ಗ್ರಾಮ ಸಹಾಯಕರಿಗೆ ವಯೋ ನಿವೃತ್ತಿ 65 ವರ್ಷ ಕಳೆದ ನಂತರ ಹುದ್ದೆಯಿಂದ ತೆಗೆದು ಹಾಕದೇ, 70 ವರ್ಷಗಳಾದರೂ ಅವರಿಗೆ ಅಕ್ರಮವಾಗಿ ಬಿಲ್ಲುಗಳನ್ನು

ತಯಾರಿಸಿ ಸಂಬಳ ಬಟಾವಣೆ ಮಾಡಿ, ಸರ್ಕಾರದ ಅದೇಶವನ್ನು ಗಣನೆಗೆ ತೆಗೆದುಕೊಳ್ಳದೇ ಕಾರ್ಯ ನಿರ್ವಹಿಸಿದ್ದಾರೆ. ಇದರಿಂದಾಗಿ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ನಷ್ಟವಾಗಿದೆ ಎಂದು ಆರೋಪ ಮಾಡಿದ್ದಾರೆ.

3. ಸದರಿ ದೂರುದಾರರ ದೂರು ಅರ್ಜಿ ಆಧಾರದಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆ ತನಿಖೆ ಮಾಡಿ ತನಿಖೆ ಪೂರ್ಣಗೊಂಡ ನಂತರ ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ12(3) ರಡಿಯಲ್ಲಿ ಉಲ್ಲೇಖ(1) ರಲ್ಲಿ ಕಾಣಿಸಿದಂತೆ ದಿನಾಂಕ 12.01.2018 ರಂದು ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ(2) ರಲ್ಲಿ ದಿನಾಂಕ 22.03.2018 ರಂದು ಉಲ್ಲೇಖಿಸಿದ್ದಾರೆ. ಅದರ ಆಧಾರದಲ್ಲಿ ಮಾನ್ಯ ಲೋಕಾಯುಕ್ತ ರವರು ದಿನಾಂಕ: 13.07.2018 ರಂದು ಅಪರ ನಿಬಂಧಕರು (ವಿಚಾರಣೆಗಳು)–8 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಉಲ್ಲೇಖ (3) ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ.

4. ನಾಮನಿರ್ದೇಶನದಂತೆ ಆಪಾದಿತ ಸರ್ಕಾರಿ ನೌಕರ ಶ್ರೀ.ಎಂ.ವಿಜಯಣ್ಣ, ತಹಶೀಲ್ದಾರರು, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಅಪರ ನಿಬಂಧಕರು (ವಿಚಾರಣೆಗಳು)–8 ರವರು ದೋಷಾರೋಪಣಾ ಪಟ್ಟಿಯನ್ನು ರಚಿಸಿದ್ದು, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 29/08/2018 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## *ಅನುಬಂಧ–1*
## *ದೋಷಾರೋಪಣೆ*

5. ಆದಕಾರಣ ಸರ್ಕಾರಿ ಆಪಾದಿತ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ನೀವು ಕರ್ನಾಟಕ ಸರ್ಕಾರಿ ಸೇವಾ (ಸದ್ವರ್ತನೆ) ನಿಯಮಾವಳಿ 1966ರ (3)(i) ರಿಂದ (iii)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

## *ಅನುಬಂಧ–2*
## ದೋಷಾರೋಪಣೆಯ ವಿವರ
(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

6. ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ಕಾರಂಜಿಕಟ್ಟೆ 2ನೇ ಕ್ರಾಸ್‌ನ ನಿವಾಸಿಯಾದ ಶ್ರೀ.ಎಂ.ಮಂಜುನಾಥ ಬಿನ್ ಮುನಿಯಪ್ಪ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ

ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ತಹಶೀಲ್ದಾರಾದ ಶ್ರೀ.ಎಂ.ವಿಜಯಣ್ಣ [ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

7. **ದೂರಿನ ಸಂಕ್ಷಿಪ್ತ ವಿವರಣೆ:-** ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ತಹಶೀಲ್ದಾರ್ ಕಾರ್ಯಾಲಯಕ್ಕೆ ಸೇರಿದ ಗ್ರಾಮ ಸಹಾಯಕರಿಗೆ ವಯೋ ನಿವೃತ್ತಿ 65 ವರ್ಷ ಕಳೆದ ನಂತರ ಹುದ್ದೆಯಿಂದ ತೆಗೆದು ಹಾಕದೇ, 70 ವರ್ಷಗಳಾದರೂ ಅವರಿಗೆ ಅಕ್ರಮವಾಗಿ ಬಿಲ್ಲುಗಳನ್ನು ಮಾಡಿ, ಸರ್ಕಾರದ ಆದೇಶವನ್ನು ಗಣನೆಗೆ ತೆಗೆದುಕೊಳ್ಳದೇ ಕಾರ್ಯನಿರ್ವಹಿಸಿದ್ದಾರೆ, ಇದರಿಂದಾಗಿ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ನಷ್ಟವಾಗಿದೆಯೆಂದು ಹೇಳಿದ್ದಾರೆ.

8. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ- ಕೋಲಾರ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಸಹಾಯಕರು ಖಾಯಂ ನೌಕರರಾಗದೇ ಇರುವುದರಿಂದ, ತಾಲ್ಲೂಕ್ ಕಛೇರಿ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಇಲ್ಲಿಯವರೆಗೂ ಅವರ ಸೇವಾ ವಹಿಯನ್ನು ನಿರ್ವಹಿಸಿಲ್ಲ. ತಾವು ಕೋಲಾರ ತಾಲ್ಲೂಕ್ ತಹಶೀಲ್ದಾರಾಗಿ ಬಂದ ನಂತರ ಕೋಲಾರ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಸಹಾಯಕರ ಸೇವಾ ವಿವರಗಳನ್ನು ನೌಕರರಿಂದ, ರಾಜಸ್ವ ನಿರೀಕ್ಷಕರಿಂದ ದಾಖಲೆಗಳನ್ನು ಪಡೆದು ಹಾಲೀ ನಿರ್ವಹಿಸಿದೆ. ತಮ್ಮ ಅವಧಿಯಲ್ಲಿ ನಿವೃತ್ತಿಗೊಳಿಸಿರುವ ಗ್ರಾಮ ಸಹಾಯಕರ ಸೇವಾ ವಿವರಗಳು ಕೆಳಕಂಡಂತಿದೆ,

| ಕ್ರ ಸಂ | ಹೆಸರು<br><br>ಶ್ರೀಯುತರಾದ | ಹೋಬಳಿ | ಕಂದಾಯ ವೃತ್ತ | ಹುದ್ದೆಯಿಂದ ವಿಮುಕ್ತಿಗೊಳಿಸಿದ ದಿನಾಂಕ |
|---|---|---|---|---|
| 1 | ವಿ.ಕೃಷ್ಣಪ್ಪ | ವೇಮಗಲ್ | ಸೀತಿ | 28/02/2017 |
| 2 | ವೆಂಕಟಮುನಿಯಪ್ಪ | ಹುತ್ತೂರು | ಪಟ್ನ | 28/02/2017 |
| 3 | ವೆಂಕಟೇಶಪ್ಪ | ವೇಮಗಲ್ | ಕುರುಗಲ್ | 31/05/2017 |
| 4 | ದೊಡ್ಡಮುನಿಯಪ್ಪ | ನರಸಾಪುರ | ಚೌಡದೇನಹಳ್ಳಿ | 30/04/2017 |
| 5 | ಮುನಿಯಪ್ಪ | ವಕ್ಕಲೇರಿ | ಆಲಹಳ್ಳಿ | 30/04/2017 |

| | | | | |
|---|---|---|---|---|
| 6 | ಎಂ.ವೆಂಕಟಶಾಮಪ್ಪ | ಹುತ್ತೂರು | ಹುತ್ತೂರ | 30/04/2017 |
| 7 | ಸೊಣ್ಣೇಳ್ಳಪ್ಪ | ಹುತ್ತೂರು | ಕೆಂಬೋಡಿ | 30/04/2017 |
| 8 | ಬಿ.ಕೆ.ಮುನಿವೆಂಕಟಪ್ಪ | ಹುತ್ತೂರು | ಶಿಳ್ಳೆಂಗೆರೆ | 30/04/2017 |

9. ಮುಂದುವರೆದು, ತಾಲ್ಲೂಕ್ ಕಛೇರಿಯ ವಿಷಯ ನಿರ್ವಾಹಕರಾದ ಶ್ರೀಮತಿ.ಹೊನ್ನರಾಜಮ್ಮ, ಗ್ರಾಮ ಲೆಕ್ಕಾಧಿಕಾರಿಗಳು, ಚೋಳಘಟ್ಟ ಕಂದಾಯ ವೃತ್ತ ರವರು ಈ ಕಛೇರಿಯಲ್ಲಿ 2012 ರಿಂದ ಗ್ರಾಮ ಸಹಾಯಕರ ವೇತನದ ಬಟಾವಾಡೆ ಮಾಡುವ ವಿಷಯ ನಿರ್ವಾಹಕರಾಗಿ ಕಾರ್ಯನಿರ್ವಹಿಸಿದ್ದು, ಗ್ರಾಮ ಸಹಾಯಕರಾದ ಶ್ರೀ.ಬಿ.ಮುನಿಹನುಮಯ್ಯ ರವರು ದಿ:01/04/1942ರಲ್ಲಿ ಜನಿಸಿದ್ದು, ದಿ:30/04/2013ರಕ್ಕೆ ಕಾರ್ಯ ವಿಮುಕ್ತಿಗೊಳಿಸಬೇಕಿದೆ. ಈ ಅವಧಿ ಕಳೆದ ದಿನವೇ ಸದರಿ ಗ್ರಾಮ ಸಹಾಯಕರನ್ನು ಕಾರ್ಯ ವಿಮುಕ್ತಿಗೊಳಿಸಲು ತಹಶೀಲ್ದಾರ್‌ರವರಿಗೆ ಕಡತವನ್ನು ಮಂಡಿಸ ಬೇಕಾಗಿದ್ದು ಅವರ ಆಧ್ಯ ಕರ್ತವ್ಯವಾಗಿದೆ. 2013 ರಿಂದ ಇಲ್ಲಿಯವರೆಗೂ ಸುಮಾರು 10 ತಹಶೀಲ್ದಾರ್‌ರ ಅವಧಿಯಲ್ಲಿ ಕಾರ್ಯ ವಿಮುಕ್ತಿ ಕಡತವನ್ನು ಮಂಡಿಸದೇ ಬಟಾವಾಡೆ ಅಧಿಕಾರಿಗಳಿಗೆ ವೇತನದ ಬಟಾವಾಡೆಗೆ ಸಹಿ ಹಾಕಿಸಿ, ಕರ್ತವ್ಯ ಲೋಪ ಮಾಡಿ ಒಟ್ಟು `3,65,000/- ಹೆಚ್ಚುವರಿ ವೇತನ ಪಾವತಿಸಲು ಕಾರಣಕರ್ತರಾಗಿದ್ದಾರೆ. ಎರಡನೆಯದಾಗಿ ಶ್ರೀ.ನಂಜಪ್ಪ ರವರು ಈ ಹಿಂದೆ ಸಲ್ಲಿಸಿರುವ ದಾಖಲೆಗಳಂತೆ ದಿ:31/01/09ಕ್ಕೆ ನಿವೃತ್ತಿಗೊಳಿಸಲು ಕಡತವನ್ನು ತಹಶೀಲ್ದಾರ್‌ರವರಿಗೆ ಮಂಡಿಸ ಬೇಕಾಗಿದ್ದು, ಅಂದಿನಿಂದ ಇಲ್ಲಿಯವರೆಗೂ ಸುಮಾರು 13 ತಹಶೀಲ್ದಾರ್‌ರ ಅವಧಿಯಲ್ಲಿ ಕಾರ್ಯ ವಿಮುಕ್ತಿ ಕಡತವನ್ನು ಮಂಡಿಸದೇ ಬಟಾವಾಡೆ ಅಧಿಕಾರಿಗಳಿಗೆ ವೇತನದ ಬಟಾವಾಡೆಗೆ ಸಹಿ ಹಾಕಿಸಿ, ಕರ್ತವ್ಯ ಲೋಪ ಮಾಡಿ ಒಟ್ಟು `3,62,000/- ಹೆಚ್ಚುವರಿ ವೇತನ ಪಾವತಿಸಲು ಸದರಿ ಶ್ರೀಮತಿ.ಹೊನ್ನರಾಜಮ್ಮ ರವರು ಕಾರಣಕರ್ತರಾಗಿದ್ದಾರೆ. ಸದರಿ ನೌಕರರಿಗೆ ಈಗಾಗಲೇ ಕಛೇರಿಯಿಂದ ಶಿಸ್ತು ಕ್ರಮ ಜರುಗಿಸುವ ಸಂಬಂಧ ಕಾರಣ ಕೇಳಿ ನೋಟೀಸ್ ನೀಡಿದ್ದು, ಸದರಿಯವರು ಮಾಹಿತಿ ಮತ್ತು ಸರ್ಕಾರಿ ಸುತ್ತೋಲೆಯ ಪರಿವೆಯಿಲ್ಲದೆ ಕಡತ ಮಂಡಿಸಿಲ್ಲವೆಂದು ಹೇಳಿದ್ದಾರೆ. ಸದರಿಯವರ ವಿರುದ್ಧ ಈಗಾಗಲೇ ಆರೋಪ ಪಟ್ಟಿ ತಯಾರು ಮಾಡಿ ಜಿಲ್ಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಿದ್ದು, ಸದರಿಯವರು ಕ್ರಮಾಂಕ:ಸಿಬ್ಬಂದಿ\ಸಿಆರ್\14\17-18 ದಿನಾಂಕ:08/06/17ರಂತೆ ಅವರನ್ನು ಕರ್ತವ್ಯದಿಂದ ಅಮಾನತ್ತುಗೊಳಿಸಿದ್ದಾರೆ. ಸದರಿ ಇಬ್ಬರು ಗ್ರಾಮ ಸಹಾಯಕರಿಗೆ ದೂರುದಾರರು

ದೂರು ಅರ್ಜಿ ನೀಡುವ ಮೊದಲೇ ಅಂದರೆ, ಮಾರ್ಚ್ ತಿಂಗಳಿನಿಂದ ವೇತನವನ್ನು ತಡೆಹಿಡಿಯಲಾಗಿದೆ. ಸದರಿ ಗ್ರಾಮ ಸಹಾಯಕರು ಹೆಚ್ಚುವರಿ ಬಟಾವಾಡೆ ಮೊತ್ತವನ್ನು ಪಾವತಿಸದೇ ಇದ್ದಲ್ಲಿ, ಅವರ ಸ್ಥಿರಾಸ್ತಿಯ ಮೇಲೆ ಬಾಕಿ ಭೂ ಕಂದಾಯ ವಸೂಲಾತಿಯಲ್ಲಿ ಕ್ರಮ ಜರುಗಿಸಲಾಗುತ್ತದೆಂದು ಹೇಳಿದ್ದಾರೆ.

10. ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

11. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ದಿನಾಂಕ:16/09/1978ರ ಸರ್ಕಾರಿ ಆದೇಶ ಸಂ:ಆರ್‌ಡಿ 3 ಎಂಎಎಸ್ 1977 ರನ್ವಯ 65 ವರ್ಷ ವಯೋಮಿತಿಯನ್ನು ಮೀರಿದ ಗ್ರಾಮ ಸಹಾಯಕರನ್ನು ಅವರ ಹುದ್ದೆಯಿಂದ ಕೂಡಲೇ ಜಾರಿಗೆ ಬರುವಂತೆ ತೆಗೆದು ಹಾಕಿ ಅನುಸರಣಾ ವರದಿಯನ್ನು ಸರ್ಕಾರಕ್ಕೆ ಕಳುಹಿಸುವಂತೆ ಕರ್ನಾಟಕ ಸರ್ಕಾರದ ಸುತ್ತೋಲೆ ಸಂ:ಆರ್‌ಡಿ 335 ಎಂಎಎಸ್ 1990ರಲ್ಲಿ ಹೇಳಿದೆ;

2) ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ತಹಶೀಲ್ದಾರ್ ಕಾರ್ಯಾಲಯಕ್ಕೆ ಸೇರಿದ ಗ್ರಾಮ ಸಹಾಯಕರಿಗೆ ವಯೋ ನಿವೃತ್ತಿ 65 ವರ್ಷ ಕಳೆದ ನಂತರ ಹುದ್ದೆಯಿಂದ ತೆಗೆದು ಹಾಕದೇ, 70 ವರ್ಷಗಳಾದರೂ ಅವರಿಗೆ ಅಕ್ರಮವಾಗಿ ಬಿಲ್ಲುಗಳನ್ನು ಮಾಡಿ, ಸರ್ಕಾರದ ಆದೇಶವನ್ನು ಗಣನೆಗೆ ತೆಗೆದುಕೊಳ್ಳದೇ ಕಾರ್ಯನಿರ್ವಹಿಸಿದ್ದಾರೆ ಮತ್ತು ಇದರಿಂದಾಗಿ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ನಷ್ಟವಾಗಿದೆಯೆಂದು ದೂರುದಾರರ ಆಪಾದನೆಯಾಗಿದ್ದು, ಸದರಿ ದೂರಿಗೆ ಪುಷ್ಟೀ ನೀಡುವಂತೆ ಎದುರುದಾರರ ಆಕ್ಷೇಪಣೆಯಲ್ಲಿ ಗ್ರಾಮ ಸಹಾಯಕರಾದ ಶ್ರೀ.ಬಿ.ಮುನಿಹನುಮಯ್ಯ ಮತ್ತು ಶ್ರೀ.ನಂಜಪ್ಪ ರವರನ್ನು ಕ್ರಮವಾಗಿ, ದಿನಾಂಕ:30/04/13 ಮತ್ತು 31/01/09ರಂದು ನಿವೃತ್ತಿಗೊಳಿಸದೇ ಅವರಿಗೆ ಕ್ರಮವಾಗಿ, `3,65,000/- ಮತ್ತು `3,62,000/- ವೇತನ ಬಟಾವಾಡೆಯಾಗಿದೆ. ಸದರಿ ವೇತನ ಬಟಾವಾಡೆಗೆ ಕೋಲಾರ ತಾಲ್ಲೂಕ್ ಕಛೇರಿಯ ವಿಷಯ ನಿರ್ವಾಹಕರಾದ ಶ್ರೀಮತಿ.ಹೊನ್ನರಾಜಮ್ಮ ರವರು ಕಡತವನ್ನು ಮಂಡಿಸದೇ ಇರುವುದು ಕಾರಣವೆಂದು ಎದುರುದಾರರು ಹೇಳಿದ್ದಾರೆ. ಮೇಲೆ ಹೇಳಿದ ಸರ್ಕಾರಿ ಸುತ್ತೋಲೆಯ ಪ್ರಕಾರ 65 ವರ್ಷ ವಯೋಮಿತಿಯನ್ನು ಮೀರಿದ ಗ್ರಾಮ ಸಹಾಯಕರನ್ನು ಹುದ್ದೆಯಿಂದ ಕೂಡಲೇ ತೆಗೆದು ಹಾಕಿ ಅನುಸರಣಾ ವರದಿಯನ್ನು ಸರ್ಕಾರಕ್ಕೆ ಕಳುಹಿಸುವ ಕರ್ತವ್ಯ ತಹಶೀಲ್ದಾರ್ ಎಂಬ ನೆಲೆಯಲ್ಲಿ ಎದುರುದಾರರದ್ದು ಸಹ ಆಗಿದ್ದು, ಅವರೇ ಮೇಲೆ ಹೇಳಿದ ಇಬ್ಬರು ಗ್ರಾಮ ಸಹಾಯಕರ ವೇತನದ ಬಟಾವಾಡೆ ವಹಿಗೆ ಸಹಿ ಮಾಡಿದ್ದು, ಸಹಿ ಮಾಡುವ ಸಂದರ್ಭದಲ್ಲಿ ಸದರಿ ಸರ್ಕಾರಿ ಸುತ್ತೋಲೆಯನ್ನು ಗಮನಕ್ಕೆ ಇಟ್ಟುಕೊಳ್ಳಬೇಕಾಗಿದೆ. ವಿಷಯ ನಿರ್ವಾಹಕರಾದ ಶ್ರೀಮತಿ. ಹೊನ್ನರಾಜಮ್ಮ

26/7/

ರವರ ವಿರುದ್ಧ ಈಗಾಗಲೇ ಇಲಾಖಾ ವಿಚಾರಣೆ ನಡೆಯುತ್ತಿದೆ. ಕಾರಣ, ಸದರಿ ಕರ್ತವ್ಯ ಲೋಪಕ್ಕೆ ಎದುರುದಾರರು ಜವಾಬ್ದಾರರಾಗಿದ್ದಾರೆ.

12. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಎದುರುದಾರರು ನೀಡಿರುವ ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

13. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

14. ಅದಲ್ಲದೆ ಎದುರದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ ಎದುರದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಕೋರಿದೆ. ಅದರಂತೆ, ಶಿಸ್ತು ನಡವಳಿಕೆಯನ್ನು ಆಪಾದಿತ ಸರ್ಕಾರಿ ನೌಕರರ ವಿರುದ್ದ ಹೂಡಿ ಇಲಾಖಾ ವಿಚಾರಣೆಯನ್ನು ಉಲ್ಲೇಖ ಒಂದರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತ ರವರಿಗೆ ವಹಿಸಿದ್ದು ಗೌರವಾನ್ವಿತ ಉಪಲೋಕಾಯುಕ್ತ ರವರು ಈ ವಿಚಾರಣಾಧಿಕಾರಿಯನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. ಆದ್ದರಿಂದ ನಿಮ್ಮ ವಿರುದ್ದ ಈ ಆಪಾದನೆ.

15. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ ಆಫ್ ಚಾರ್ಜಸ್) ಆಸನೌ ರವರಿಗೆ ಕಳುಹಿಸಿದ್ದು, ಸದರಿ ಆಪಾದಣೆ ಪ್ರತಿ ಆಸನೌ ರವರಿಗೆ ಜಾರಿಯಾಗಿ ಆಸನೌ ರವರು ದಿನಾಂಕ 05.11.2018 ರಂದು ಹಾಜರಾಗಿದ್ದು, ಎಸ್.ಎಂ.ಡಿ ವಕೀಲರು ಅವರ ಪರವಾಗಿ ವಕಾಲತ್ತನ್ನು ಸಲ್ಲಿಸಿದ್ದಾರೆ. ಆಸನೌ ರವರು ಪ್ರಥಮ ಮೌಖಿಕ ಹೇಳಿಕೆ ನಿಯಮ-11 ಕೆ.ಸಿ.ಎಸ್. ಸಿಸಿಎ

ನಿಯಮಗಳ ಅಡಿಯಲ್ಲಿ ದಾಖಲಿಸಲಾಗಿರುತ್ತದೆ ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯಾಗಬೇಕೆಂದು ಕೇಳಿಕೊಂಡಿದ್ದಾರೆ.

16. ಆ.ಸ.ನೌ ರವರಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

17. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರಿಂದ ಲಿಖಿತ ಹೇಳಿಕೆಯನ್ನು ದಾಖಲು ಮಾಡಲು ಅವಕಾಶ ನೀಡಲಾಗಿದ್ದು, ಸದರಿಯವರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ತಮ್ಮ ಆಕ್ಷೇಪಣೆಯಲ್ಲಿ ಕೋಲಾರ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಸಹಾಯಕರು ಖಾಯಂ ನೌಕರರಾಗದೇ ಇರುವುದರಿಂದ, ತಾಲ್ಲೂಕು ಕಚೇರಿ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಇಲ್ಲಿಯವರೆಗೂ ಅವರ ಸೇವಾ ವಹಿಯನ್ನು ನಿರ್ವಹಿಸಿಲ್ಲ. ತಾವು ಕೋಲಾರ ತಾಲ್ಲೂಕು ತಹಶೀಲ್ದಾರರಾಗಿ ಬಂದ ನಂತರ ಕೋಲಾರ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಸಹಾಯಕರ ಸೇವಾ ವಿವರಗಳನ್ನು ನೌಕರರಿಂದ, ನಿರೀಕ್ಷಕರ ದಾಖಲೆಗಳನ್ನು ಪಡೆದು ಹಾಲೀ ನಿರ್ವಹಿಸದೇ. ತಮ್ಮ ಅವಧಿಯಲ್ಲಿ ನಿವೃತ್ತಿಗೊಳಿಸಿರುವ ಗ್ರಾಮ ಸಹಾಯಕರ ಸೇವಾ ವಿವರಗಳನ್ನು ಪಟ್ಟಿ ಮಾಡಲಾಗಿದೆ.

18. ಮುಂದುವರೆದು ತಾಲ್ಲೂಕು ಕಚೇರಿಯ ವಿಷಯ ನಿರ್ವಾಹಕಾರದ ಶ್ರೀಮತಿ ಹೊನ್ನರಾಜಮ್ಮ ಗ್ರಾಮ ಲೆಕ್ಕಾಧಿಕಾರಿಗಳು, ಚೋಳಘಟ್ಟ ಕಂದಾಯ ವೃತ್ತ ರವರು ಈ ಕಚೇರಿಯಲ್ಲಿ 2012 ರಿಂದ ಗ್ರಾಮ ಸಹಾಯಕರ ವೇತನದ ಬಟಾವಾಡೆ ಮಾಡುವ ವಿಷಯ ನಿರ್ವಾಹಕರಾಗಿ ಕಾರ್ಯನಿರ್ವಹಿಸಿದ್ದು, ಗ್ರಾಮ ಸಹಾಯಕರಾದ ಶ್ರೀ.ಬಿ.ಮುನಿಹನುಮಯ್ಯ ರವರು ದಿನಾಂಕ 01.04.1942 ರಲ್ಲಿ ಜನಿಸಿದ್ದು ದಿನಾಂಕ 30.04.2013ಕ್ಕೆ ಕಾರ್ಯ ವಿಮುಕ್ತಿಗೊಳಿಸಬೇಕಿದೆ. ಈ ಅವಧಿಯಲ್ಲಿ ಕಳೆದ ದಿನವೇ ಸದರಿ ಗ್ರಾಮ ಸಹಾಯಕರನ್ನು ಕಾರ್ಯ ವಿಮುಕ್ತಿಗೊಳಿಸಲು ತಹಶೀಲ್ದಾರ್‌ರವರಿಗೆ ಕಡತವನ್ನು ಮಂಡಿಸಬೇಕಾಗಿದ್ದು ಅವರ ಆದ್ಯ ಕರ್ತವ್ಯವಾಗಿದೆ. 2013 ರಿಂದ ಇಲ್ಲಿಯವರೆಗೂ ಸುಮಾರು 10 ತಹಶೀಲ್ದಾರರ ಅವಧಿಯಲ್ಲಿ ಕಾರ್ಯ ವಿಮುಕ್ತಿ ಕಡತವನ್ನು ಮಂಡಿಸದೇ ಬಟಾವಾಡೆ ಅಧಿಕಾರಿಗಳಿಗೆ ವೇತನದ ಬಟಾವಡೆಗೆ ಸಹಿ ಹಾಕಿಸಿ, ಕರ್ತವ್ಯ ಲೋಪ ಮಾಡಿ ಒಟ್ಟು ರೂ.3.65.000/- ಹೆಚ್ಚುವರಿ ವೇತನ ಪಾವತಿಸಲು ಕಾರಣಕರ್ತರಾಗಿದ್ದಾರೆ. ಎರಡನೇಯದಾಗಿ ಶ್ರೀ.ನಂಜಪ್ಪ ರವರು ಈ ಹಿಂದೆ ಸಲ್ಲಿಸಿರುವ ದಾಖಲೆಗಳಂತೆ ದಿನಾಂಕ 31.01.2009 ಕ್ಕೆ ನಿವೃತ್ತಿಗೊಳಿಸಲು ಕಡತವನ್ನು ತಹಶೀಲ್ದಾರರ ರವರಿಗೆ ಮಂಡಿಸಬೇಕಾಗಿದ್ದು ಅಂದಿನಿಂದ ಇಲ್ಲಿಯವರೆಗೂ ಸುಮಾರು 13 ತಹಶೀಲ್ದಾರರ ಅವಧಿಯಲ್ಲಿ ಕಾರ್ಯ ವಿಮುಕ್ತಿ ಕಡತವನ್ನು ಮಂಡಿಸದೇ ಬಟಾವಾಡೆ ಅಧಿಕಾರಿಗಳಿಗೆ ವೇತನದ ಬಟಾವಾಡೆಗೆ ಸಹಿ ಹಾಕಿಸಿ ಕರ್ತವ್ಯ ಲೋಪ ಮಾಡಿ ಒಟ್ಟು ರೂ.3.62,000/- ಹೆಚ್ಚುವರಿ ವೇತನ ಪಾವತಿಸಲು ಸದರಿ ಶ್ರೀಮತಿ ಹೊನ್ನರಾಜಮ್ಮ ರವರು ಕಾರಣಕರ್ತರಾಗಿದ್ದಾರೆ.

19. ಈಗಾಗಲೇ ಕಚೇರಿಯಿಂದ ಶಿಸ್ತು ಕ್ರಮ ಜರುಗಿಸುವ ಸಂಬಂಧ ಕಾರಣ ಕೇಳಿ ನೋಟೀಸ್ ನೀಡಿದ್ದು ಸದರಿಯವರು ಮಾಹಿತಿ ಮತ್ತು ಸರ್ಕಾರಿ ಸುತ್ತೋಲೆಯ ಪರಿವೆಯಿಲ್ಲದೇ ಕಡತ ಮಂಡಿಸಿಲ್ಲವೆಂದು ಹೇಳಿದ್ದಾರೆ. ಸದರಿಯವರ ವಿರುದ್ಧ ಈಗಾಗಲೇ ಆರೋಪ ಪಟ್ಟಿ ತಯಾರು ಮಾಡಿ ಜಿಲ್ಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಿದ್ದು, ಸದರಿಯವರು ಕ್ರಮಾಂಕ:ಸಿಬ್ಬಂದಿ/ಸಿಆರ್/14/17-18 ದಿನಾಂಕ 08/06/2017 ರಂತೆ ಅವರನ್ನು ಕರ್ತವ್ಯದಿಂದ ಅಮಾನತುಗೊಳಿಸಿದ್ದಾರೆ. ಇಬ್ಬರು ಗ್ರಾಮ ಸಹಾಯಕರಿಗೆ ದೂರುದಾರರು ದೂರು ಅರ್ಜಿ ನೀಡುವ ಮೊದಲೇ ಅಂದರೆ, ಮಾರ್ಚ್ ತಿಂಗಳಿನಿಂದ ವೇತನವನ್ನು ತಡೆಹಿಡಿಯಲಾಗಿದೆ. ಸದರಿ ಗ್ರಾಮ ಸಹಾಯಕರು ಹೆಚ್ಚುವರಿ ಬಟಾವಾಡೆ ಮೊತ್ತವನ್ನು ಪಾವತಿಸದೇ ಇದ್ದಲ್ಲಿ, ಅವರ ಸ್ಥಿರಾಸ್ತಿಯ ಮೇಲೆ ಬಾಕಿ ಭೂ ಕಂದಾಯ ವಸೂಲಾತಿಯಲ್ಲಿ ಕ್ರಮ ಜರುಗಿಸಲಾಗುತ್ತದೆಂದು ಹೇಳಿದ್ದಾರೆ.

20. ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

21. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರನ್ನು ಪ್ರಾ.ಸ.1 ಎಂದು ಸಾಕ್ಷ್ಯ ಹಾಜರುಪಡಿಸಿ ತಮ್ಮ ಪರವಾಗಿ, ನಿ.ಡಿ.1 ರಿಂದ ನಿ.ಡಿ.4 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ತಮ್ಮ ಸಾಕ್ಷ್ಯ ಹಾಜರು ಪಡಿಸಿದ್ದು, ನಿ.ಡಿ.1 ರಿಂದ ನಿ.ಡಿ.15 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ.

22. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಆಲಿಸಲಾಯಿತು. ಆ.ಸ.ನೌ ರವರ ಪರ ವಕೀಲರು ತಮ್ಮ ಪರವಾಗಿ ಲಿಖಿತ ವಾದವನ್ನು ಸಲ್ಲಿಸಿದ್ದಾರೆ. ಮತ್ತು ಮಂಡನಾಧಿಕಾರಿಯವರು ವಾದವನ್ನು ಮಂಡಿಸಿರುತ್ತಾರೆ.

23. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ-1: ವಿಚಾರಣಾ ಪ್ರಾಧಿಕಾರವು ಆಸನೌ ರವರು ಕೋಲಾರ ಜಿಲ್ಲೆ ಮತ್ತು ತಾಲ್ಲೂಕಿನಲ್ಲಿ 2007-2013 ನೇ ಅವಧಿಯಲ್ಲಿ ಸದರಿ ಕಚೇರಿಯಲ್ಲಿ ಗ್ರಾಮ ಸಹಾಯಕರಾದ ಹನುಮಯ್ಯ ದಿನಾಂಕ 30.04.2013 ರಂದು ಸೇವಾ ವಯೋ ನಿವೃತ್ತಿ ಹೊಂದಿದ್ದರೂ ಅವಧಿ ದಿನ ಕಳೆದ ನಂತರ ಕಡತವನ್ನು ಮಂಡಿಸದೇ 2013 ರಿಂದ 2017 ರವರೆಗೆ ಅವರ ಒಟ್ಟು ಸಂಬಳ ರೂ.3,65,000/-ವನ್ನು ವಿತರಣೆ ಮಾಡಿ ಮತ್ತು ಅದೇ ರೀತಿ ನಂಜಪ್ಪ ಎನ್ನುವವರು ಕೂಡಾ ಗ್ರಾಮ ಸಹಾಯಕರಾಗಿ**

**ಕಾರ್ಯ ನಿರ್ವಹಿಸುತ್ತಿದ್ದು ಅವರು 31.01.2009ಕ್ಕೆ ನಿವೃತ್ತಿ ಹೊಂದಿದ್ದರೂ ಕಡತವನ್ನು ಮಂಡಿಸದೇ 2017 ರವರೆಗೆ ಸಂಬಳ ವಿತರಣೆ ಮಾಡಿ ಒಟ್ಟು ರೂ,3,62,000/- ಸಂಬಳ ಹೆಚ್ಚುವರಿ ವೇತನ ಪಾವತಿ ಮಾಡಿ ಲೋಕ ನೌಕರರಾಗಿ ಕರ್ತವ್ಯ ಲೋಪವೆಸಗಿದ್ದಾರೆ ಎಂದು ಆಪಾದಿಸಲಾದ ಆರೋಪಗಳನ್ನು ಸಾಬೀತುಪಡಿಸಿದ್ದಾರೆಯೇ?**

**ಅಂಶ-2: ಆದೇಶವೇನು?**

24. ಕಡತಗಳನ್ನು ಪರಿಶೀಲಿಸಲಾಯಿತು, ಲಭ್ಯವಿರುವ ಮೌಖಿಕ ಮತ್ತು ಲಿಖಿತ ದಾಖಲೆ ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

25. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ನಕರಾತ್ಮಕ**
**ಅಂಶ 2: ಅಂತಿಮ ಆದೇಶದಂತೆ.**

## :: ಕಾರಣಗಳು ::

26. **ಅಂಶ 1:**

27. ಅಭೀಯೋಕ್ತ ಮಂಡನಾದಿಕಾರಿಗಳು ಆಸನೌ ರವರ ಮೇಲೆ ಮಾಡಿದ ಆಪಾದನೆಯನ್ನು ಸಾಬೀತುಪಡಿಸಲು ತಮ್ಮ ಪರವಾಗಿ ಪ್ರಾ.ಸ-1 ಮಂಜುನಾಥ ರವರ ಸಾಕ್ಷಿ ಹಾಜರು ಪಡಿಸಿದ್ದು, ಸದರಿಯವರು ತಮ್ಮ ಮೌಖಿಕ ಸಾಕ್ಷ್ಯದಲ್ಲಿ ತಾವು ಆಸನೌ ರವರ ಮೇಲೆ ಅನಧೀಕೃತವಾಗಿ ಸದರಿ ಬಿ.ಹನುಮಯ್ಯ ಮತ್ತು ನಂಜಪ್ಪ ಅಂದಿನ ಗ್ರಾಮ ಸಹಾಯಕರಾಗಿ ನಿವೃತ್ತಿ ಹೊಂದಿದ ನಂತರ ಅವರಿಗೆ ಸಂಬಳ ಬಿಡುಗಡೆ ಮಾಡಿದ ಬಗ್ಗೆ ತಾವು ಯಾವುದೇ ದೂರನ್ನು ಲೋಕಾಯುಕ್ತ ಕಚೇರಿಗೆ ನಿ.ಪಿ-1 ರಿಂದ ನಿ.ಪಿ-3 ಎಂದು ದೂರು ಸಲ್ಲಿಸಿಲ್ಲ ಮತ್ತು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದು ಪ್ರತಿಕೂಲ ಸಾಕ್ಷ್ಯದಲ್ಲಿ ಸಾಕ್ಷ್ಯ ನುಡಿದಿದ್ದಾರೆ.

28. ಅಭಿಯೋಕ್ತ ಮಂಡನಾಧಿಕಾರಿಗಳು ಪ್ರಾ.ಸ-1 ರವರನ್ನು ಪ್ರತಿಕೂಲ ಸಾಕ್ಷ್ಯವನ್ನಾಗಿ ಪರಿಗಣಿಸಿ ವಿವರವಾದ ಪಾಟೀ ಸವಾಲನ್ನು ಮಾಡಿದ್ದು, ದೂರುದಾರ ಪ್ರಾ.ಸ.1 ರವರು ಆಸಸನೌ ರವರ ಮಲೆ ಆಪಾದಣೆ ಮಾಡಿ ಗ್ರಾಮ ಸಹಾಯಕರಿಗೆ ನಿವೃತ್ತಿ ಅವಧಿಯ ನಂತರವೂ ಸಂಬಳ ಬಿಡುಗಡೆ ಮಾಡಿದ ಬಗ್ಗೆ ಮತ್ತು ನಿ.ಪಿ-1 ಸಲ್ಲಿಸಿದ ಬಗ್ಗೆ ಅಲ್ಲಗಳೆದಿದ್ದಾರೆ.

29. ಪ್ರಾ.ಸ.1 ರವರ ಸಾಕ್ಷ್ಯವನ್ನು ಗಮನಕ್ಕೆ ತೆಗೆದುಕೊಂಡು ಸದರಿಯವರು ನಿ.ಪಿ-1 ರಿಂದ ನಿ.ಪಿ-3 ರಲ್ಲಿ ಲಿಖಿತ ದೂರನ್ನು ಸಲ್ಲಿಸಿದ್ದರು ಅದರಲ್ಲಿ ಆರೋಪಗಳನ್ನು ಅಲ್ಲಗಳೆದು ವಿಚಾರಣಾ

ಪ್ರಾಧಿಕಾರದ ಆರೋಪಕ್ಕೆ ಪ್ರತಿಕೂಲ ಸಾಕ್ಷಿ ನುಡಿದಿದ್ದು ಅವರ ಸಾಕ್ಷ್ಯ ಆಸನೌ ರವರ ಮೇಲೆ ಮಾಡಿದ ಆಪಾದನೆಗಳನ್ನು ಸಾಬೀತುಪಡಿಸಲು ಪೂರಕ ಸಾಕ್ಷ್ಯ ಬಲವನ್ನು ನೀಡಲು ಸಂಪೂರ್ಣವಾಗಿ ವಿಫಲವಾಗಿದೆ ಗಮನಕ್ಕೆ ತೆಗೆದುಕೊಳ್ಳಲಾಗಿದೆ.

30. ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಬೇರೆ ಯಾವುದೇ ಲಿಖಿತ/ಮೌಖಿಕ ಸಾಕ್ಷ್ಯಗಳನ್ನು ಹಾಜರು ಪಡಿಸಿಲ್ಲ.

31. ಆಸನೌ ರವರು ತಮ್ಮ ರಕ್ಷಣಾತ್ಮಕ ಹೇಳಿಕೆ ಮತ್ತು ತಕರಾರುಗಳಿಗೆ ಪೂರಕವಾಗಿ ಖುದ್ದು ತಮ್ಮ ಸಾಕ್ಷ್ಯವನ್ನು ಹಾಜರು ಪಡಿಸಿದ್ದು ಸದರಿಯವರು ತಮ್ಮ ಸಾಕ್ಷ್ಯದಲ್ಲಿ ತಮ್ಮನ್ನು ಈ ಮೊದಲು 2015 ರಲ್ಲಿ ತಹಶೀಲ್ದಾರರಾಗಿ ಬಡ್ತಿ ನೀಡಿ ಅವರನ್ನು 2015 ನೇ ಸಾಲಿನಲ್ಲಿ ಕೋಲಾರ ಜಿಲ್ಲೆ ಮತ್ತು ತಾಲ್ಲೂಕಿಗೆ ವರ್ಗಾವಣೆ ಮಾಡಲಾಗಿದ್ದು, ಆ ಸಂದರ್ಭದಲ್ಲಿ ಇಲಾಖೆಯಲ್ಲಿ ಮಂಜುನಾಥ ಪ್ರಾ.ಸ.1 ರವರು ಲೋಕಾಯಕ್ತಕ್ಕೆ ದೂರು ಸಲ್ಲಿಸಿದ ಆಪಾದನೆಗಳನ್ನು ಗಮನಿಸಿ ದಾಖಲೆಗಳನ್ನು ಪರಿಶೀಲಿಸಿದಾಗ ಕೋಲಾರ ತಹಶೀಲ್ದಾರ ಕಚೇರಿಯಲ್ಲಿ ಗ್ರಾಮ ಸಹಾಯಕರು ಖಾಯಂ ನೌಕರರಾಗಿರದೇ ಅಲ್ಲಿಯವರೆಗೂ ಸೇವಾ ವಹಿಯನ್ನು ನಿರ್ವಹಿಸಿರುವುದಿಲ್ಲ. ಅವರು ಕೋಲಾರ ತಹಶೀಲ್ದಾರರಾಗಿ ಪ್ರಭಾರಿ ಪಡೆದ ನಂತರ ಸೇವಾ ವಿವರಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ತಮ್ಮ ಅವಧಿಯಲ್ಲಿ ಸುಮಾರು 8 ಜನ ಗ್ರಾಮ ಸಹಾಯಕರು ನಿವೃತ್ತಿ ಹೊಂದಿದ್ದು 2012 ರವರೆಗೆ ಅಂದಿನ ವಿಷಯ ನಿರ್ವಾಹಕರಾದ ಶ್ರೀಮತಿ ಹೊನ್ನರಾಜಮ್ಮ ನವರು ಗ್ರಾಮ ಲೆಕ್ಕಾಧಿಕಾರಿಗಳು, ಚೋಳಗಟ್ಟ ಕಂದಾಯ ವೃತ್ತ ಕಚೇರಿಯಲ್ಲಿ 2012 ರಿಂದ ಸದರಿ ಗ್ರಾಮ ಸಹಾಯಕರ ವೇತನದ ಬಟಾವಡೆ ಕಾರ್ಯ ನಿರ್ವಹಿಸಿದ್ದು ಸದರಿ ಹನುಮಯ್ಯ ರವರು ದಿನಾಂಕ 01.04.1942 ರಂದು ಜನಿಸಿದ್ದು ಸೇವಾ ಅವಧಿ ದಿನಾಂಕ 30.4.2013ಕ್ಕೆ ಅಂತ್ಯಗೊಂಡಿದ್ದು, ಅವರನ್ನು ಸೇವೆಯಿಂದ ನಿವೃತ್ತಿಗೊಳಿಸಬೇಕಾಗಿದೆ ಮತ್ತು ಸದರಿ ಕಡತವನ್ನು ಅಂದಿನ ತಹಶೀಲ್ದಾರರ ಮುಂದೆ ಮಂಡಿಸಬೇಕಾಗಿದ್ದು ಅವರ ಆಧ್ಯ ಕರ್ತವ್ಯವಾಗಿದೆ. 2013 ರಿಂದ ಪ್ರಸ್ತುತ ದೂರು ದಿನಾಕ 27.02.2017 ನೀಡುವ ವರೆಗೆ ಮಧ್ಯದ ಅವಧಿಯಲ್ಲಿ ಸುಮಾರು 10 ತಹಶೀಲ್ದಾರರ ಮತ್ತು ಆಸನೌ ರವರು 2015 ರಲ್ಲಿ ಪ್ರಭಾರಿ ತೆಗೆದುಕೊಂಡ ನಂತರವೂ ಕಡತವನ್ನು ಮಂಡಿಸದೇ ಸದರಿ ಹನುಮಯ್ಯ ರವರ ಸಂಬಳ ವಿತರಣಾ ಕ್ರಮವನ್ನು ಕಾನೂನು ಬಾಹಿರವಾಗಿ ನಿರ್ವಹಿಸಿ ಕರ್ತವ್ಯ ಲೋಪ ಮಾಡಿ ಒಟ್ಟು ಸರ್ಕಾರಕ್ಕೆ ರೂ.3,65,000/- ಹೆಚ್ಚುವರಿ ವೇತನ ಪಾವತಿಸಿ ಕರ್ತವ್ಯ ಲೋಪವೆಸಗಿದ್ದಾರೆ. ಅದರಂತೆ ಶ್ರೀ.ನಂಜಪ್ಪ ಗ್ರಾಮ ಸೇವಕರಿಗೆ ಸಂಬಂಧಿಸಿದಂತೆ ಸದರಿಯವರು ದಿನಾಂಕ: 31.01.2009ಕ್ಕೆ ನಿವೃತ್ತಿ ಹೊಂದಿದ್ದು ಅವರ ಕಡತವನ್ನು ಕೂಡಾ ಅಂದಿನ ಮಧ್ಯ ಅವಧಿಯ ಒಟ್ಟು 13 ತಹಶೀಲ್ದಾರರ ಮುಂದೆ ಮತ್ತು ಆಸನೌ ರವರು 2015 ರಲ್ಲಿ ಪ್ರಭಾರಿ

ತೆಗೆದುಕೊಂಡ ನಂತರವೂ ಕಡತವನ್ನು ಮಂಡಿಸದೇ ಸದರಿಯವರಿಗೆ ರೂ.3,62,000/- ಹೆಚ್ಚುವರಿ ವೇತನ ಪಾವತಿ ಮಾಡಿದ್ದಾರೆ. ಇದಕ್ಕೆಲ್ಲವೂ ಅಂದಿನ ಗ್ರಾಮ ಲೆಕ್ಕಾಧಿಕಾರಿ ಹೊನ್ನರಾಜಮ್ಮ ರವರು ಹೊಣೆಗಾರರಾಗಿದ್ದು ಕರ್ತವ್ಯ ಲೋಪವೆಸಗಿದ್ದಾರೆ. ಈ ಬಗ್ಗೆ ತಾವು ಪ್ರಭಾರಿ ಪಡೆದುಕೊಂಡ ನಂತರ ಎಲ್ಲ ಕಡತಗಳನ್ನು ಪರಿಶೀಲಿಸಿ ಮೇಲಾದಿಕಾರಿಗಳ ಅನುಮತಿ ಪಡೆದುಕೊಂಡು ಸದರಿ ರಾಜಹೊನ್ನಮ್ಮ ರವರ ವಿರುದ್ಧ ಆರೋಪ ಪಟ್ಟಿಯನ್ನು ತಯಾರಿಸಿ ಜಿಲ್ಲಾಧಿಕಾರಿಗಳ ಶಿಫಾರಸ್ಸು ಮೇರೆಗೆ ಕಡತ ಸಂಖ್ಯೆ ಕ್ರಮಾಂಕ ಸಿಬ್ಬಂದಿ/ಸಿಆರ್/14/17-18 ರಲ್ಲಿ ಮಾಡಿದ ಆದೇಶದಂತೆ ದಿನಾಂಕ 08.06.2017 ರಂದು ಅವರನ್ನು ಕರ್ತವ್ಯದಿಂದ ಅಮಾನತುಗೊಳಿಸಿ ಆದೇಶ ಹೊರಡಿಸಲಾಗಿದ್ದು ಮತ್ತು ದುರುದಾರರು ದೂರು ಸಲ್ಲಿಸುವ ಮೊದಲೇ ಸದರಿ ಲೋಪವನ್ನು ಕಂಡು ಹಿಡಿದು 2017 ಮಾರ್ಚ್ ತಿಂಗಳಲ್ಲಿಯೇ ಹನುಮಯ್ಯ ಮತ್ತು ನಂಜಪ್ಪ ರವರು ವೇತನವನ್ನು ತಡೆ ಹಿಡಿಯಲಾಗಿತ್ತು ಮತ್ತು ಬಾಕಿ ಹಣವನ್ನು ವಸೂಲಾತಿ ಮಾಡಬೇಕಾಗಿತ್ತು ಮತ್ತು ಅವರ ಚರಸ್ಥಿರ ಆಸ್ತಿಯ ಮೇಲೆ ಭೂ ಬಾಕಿ ಕಂದಾಯ ವಸೂಲಾತಿಯ ಕ್ರಮ ಜರುಗಿಸಲು ಆದೇಶ ಮಾಡಲಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

32. ಅಲ್ಲದೇ ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಹೆಚ್ಚುವರಿ ಸಂಬಳದ ಬಟಾವಣೆಯನ್ನು ತಮ್ಮ ಅಧಿಕಾರ ಪ್ರಭಾರಿ ಅವಧಿಯಲ್ಲಿ ಮಾಡಲಾಗಿಲ್ಲ. ಅದಕ್ಕೆ ಸಂಬಂಧಿಸಿದ ಗ್ರಾಮ ಲೆಕ್ಕಾಧಿಕಾರಿ ರಾಜಹೊನ್ನಮ್ಮನವರ ವಿರುದ್ಧ ಇಲಾಖಾ ತನಿಖೆ ಕೈಗೊಳ್ಳಲಾಗಿದ್ದು ಮತ್ತು ಹೆಚ್ಚುವರಿ ಸಂಬಳ ಪಡೆದ ಹನುಮಯ್ಯ ಮತ್ತು ನಂಜಪ್ಪ ರವರ ಮೇಲೆ ಹಣ ವಸೂಲಾತಿಯನ್ನು ಕಂದಾಯ ಭೂ ಕಂದಾಯ ಅಧಿನಿಯಮದಡಿಯಲ್ಲಿ ಅವರ ಚರಸ್ಥಿರ ಆಸ್ತಿಗಳನ್ನು ಜಪ್ತಿ ಮಾಡಿ ಆದೇಶ ಹೊರಡಿಸಲಾಗಿದೆ ಎಂದು ಸಾಕ್ಷ್ಯ ನುಡಿದಿದ್ದು ಈ ಬಗ್ಗೆ ತಮ್ಮ ತಕರಾರಿನಲ್ಲಿ ಪೂರಕ ದಾಖಲೆಗಳನ್ನು ಕೂಡಾ ಹಾಜರುಪಡಿಸಿದ್ದಾರೆ ಸಾಕ್ಷ್ಯ ನುಡಿದಿದ್ದು ಮತ್ತು ಮುಂದುವರೆದು ಸದರಿ ಹೆಚ್ಚುವರಿ ಸಂಬಳ ಪಾವತಿ ಮಾಡಿದ ಕರ್ತವ್ಯ ಲೋಪವನ್ನು ತಾವೇ ಪತ್ತೆ ಹಚ್ಚಿ ಕಂಡು ಹಿಡಿದು ಇಲಾಖೆಗೆ ಅನುಕೂಲ ಮಾಡಿದ್ದರೂ ಸುಳ್ಳು ದೂರು ದಾಖಲಾಗಿದ್ದು ಅದರ ಆಧಾರದ ಮೇಲೆ ಈ ಶಿಸ್ತು ಪ್ರಾಧಿಕಾರ ವಿಚಾರಣೆ ಕೈಗೊಂಡಿದೆ ಎಂದು ಪ್ರಸ್ತಾಪ ಮಾಡಿದ್ದಾರೆ.

33. ಆಸನೌ ರವರು ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿ.ಡಿ-1 ಹಾಜರು ಪಡಿಸಿದ್ದು, ಸದರಿ ದಾಖಲೆಯಲ್ಲಿ ದಿ:06.09.2017 ರಂದು ಇಲಾಖೆಯ ಇಬ್ಬರು ಗ್ರಾಮ ಸೇವಕರ ಬಗ್ಗೆ ನಿವೃತ್ತಿ ಆದ ನಂತರವೂ ಕೂಡಾ ಸಂಬಳ ವಿತರಣೆ ಆಗುತ್ತಿರುವ ಬಗ್ಗೆ ಕೂಡಲೇ ಕ್ರಮ ಜರುಗಿಸಲು ಒಟ್ಟು ಗ್ರಾಮ ಸೇವಕರ ಪಟ್ಟಿಯನ್ನು ತಯಾರಿಸಿ ಅದರಲ್ಲಿ ಒಟ್ಟು 8 ಜನರು ಗ್ರಾಮ ಸೇವಕರಾಗಿ ಕಾರ್ಯ ನಿರ್ವಹಿಸುತ್ತಿದ್ದು, ಅವರನ್ನು ದಿ:22.8.2017 ರಂದು ನಿವೃತ್ತಿಗೊಳಿಸಬೇಕಾಗಿದ್ದು ಮತ್ತು ಇದಕ್ಕೆ

ಸಂಬಂಧಿಸಿದ್ದು ಕಂಡು ಬರುತ್ತಿದೆ. ಸದರಿ ಇಬ್ಬರು ಶಂಕಿತ ಗ್ರಾಮ ಸೇವಕರಾದ ಹನುಮಯ್ಯ ಮತ್ತು ನಂಜಪ್ಪ ಇವರಿಗೆ ಅನಧೀಕೃತವಾಗಿ ಅಂದಿನ ಗ್ರಾಮ ಸೇವಕರು ರಾಜಹೊನ್ನಮ್ಮ ಇವರು ಅನಧೀಕೃತವಾಗಿ 2009 ರಿಂದ 2013 ರವರೆಗೆ ಸಂಬಂಧಿತ ತಹಶೀಲ್ದಾರರ ಮುಂದೆ ನಿವೃತ್ತಿ ದಿನವನ್ನು ಪ್ರಸ್ತಾಪಿಸಿ ಕಡತ ಮಂಡಿಸದ ಕಾರಣ ಅನಧೀಕೃತವಾಗಿ ಸಂಬಳ ಪಡೆದ ಬಗ್ಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಿದ್ದು ನಿ.ಡಿ–3, ನಿ.ಡಿ–4 ರಿಂದ ಕಂಡು ಬರುತ್ತದೆ

34. ಅದಲ್ಲದೇ ದಿನಾಂಕ 29.05.2017 ರಂದು ಆಸನೌ ರವರು ಜ್ಞಾಪನ ಆದೇಶ ಹೊರಡಿಸಿ ನಂಜಪ್ಪ ಗ್ರಾಮ ಸಹಾಯಕರಿಂದ ಅನಧೀಕೃತವಾಗಿ ನಿವೃತ್ತಿ ಅವಧಿ ಮುಗಿದ ನಂತರ ಸ್ವೀಕರಿಸಿದ ಒಟ್ಟು ಸಂಬಳ ರೂ.3,62,000/– ವನ್ನು ಮರುಪಾವತಿ ಮಾಡಲು ಜ್ಞಾಪನಾ ಪತ್ರ ನೀಡಿದ್ದು ನಿ.ಡಿ–5 ರಲ್ಲಿ ಸ್ಪಷ್ಟವಾಗಿ ಕಂಡು ಬರುತ್ತಿದೆ.

35. ಅದೇ ರೀತಿ ದಿನಾಂಕ 18.05.2017 ರಂದು ಮುನಿಹನುಮಯ್ಯ ಆಸನೌ ರವರು ಜ್ಞಾಪನ ಆದೇಶ ಹೊರಡಿಸಿ ನಂಜಪ್ಪ ಗ್ರಾಮ ಸಹಾಯಕರಿಂದ ಅನಧೀಕೃತವಾಗಿ ನಿವೃತ್ತಿ ಅವಧಿ ಮುಗಿದ ನಂತರ ಸ್ವೀಕರಿಸಿದ ಒಟ್ಟು ಸಂಬಳ ರೂ.3,62,000/– ವನ್ನು ಮರುಪಾವತಿ ಮಾಡಲು ಜ್ಞಾಪನಾ ಪತ್ರ ನೀಡಿದ್ದು ನಿ.ಡಿ–5 ರಲ್ಲಿ ಸ್ಪಷ್ಟವಾಗಿ ಕಂಡು ಬರುತ್ತಿದೆ.

36. ಅದೇ ರೀತಿ ಸದರಿ ರಾಜಹೊನ್ನಮ್ಮ ರವರಿಗೆ ದಿ:08.06.2017ರ ನೀಡಿದ ನೋಟೀಸ್ ಮುಖಾಂತರ ಸದರಿ ರಾಜಹೊನ್ನಮ್ಮ ಇವರು ಮುನಿಹನುಮಯ್ಯ ಮತ್ತು ನಂಜಪ್ಪ ಗ್ರಾಮ ಸಹಾಯಕರು ಕಾನೂನು ಬಾಹಿರವಾಗಿ ವೇತನ ಪಡೆಯಲು ಸಹಕರಿಸಿ ಕರ್ತವ್ಯ ಲೋಪ ಮಾಡಿದ ಬಗ್ಗೆ ಸದರಿ ರಾಜಹೊನ್ನಮ್ಮ ಗ್ರಾಮ ಲೆಕ್ಕಾಧಿಕಾರಿಗೆ ಪ್ರಾಥಮಿಕ ಹಂತದಲ್ಲಿ ಸಾಕ್ಷ್ಯ ಕಂಡು ಬಂದ ಕಾರಣ ಅಮಾನತು ಆದೇಶ ಹೊರಡಿಸಿದ್ದು ನಿ.ಡಿ–9 ರಿಂದ ವ್ಯಕ್ತವಾಗುತ್ತಿದೆ.

37. ಅದೇ ರೀತಿ ದಿ:04.05.2017 ರಂದು ಮುನಿಹನುಮಯ್ಯ ಮತ್ತು ನಂಜಪ್ಪ ಗ್ರಾಮ ಸಹಾಯಕರು ಕಾನೂನು ಬಾಹಿರವಾಗಿ ವೇತನ ಪಡೆಯಲು ಸಹಕರಿಸಿ ಕರ್ತವ್ಯ ಲೋಪ ಮಾಡಿದ ಬಗ್ಗೆ ಸದರಿ ರಾಜಹೊನ್ನಮ್ಮ ಗ್ರಾಮ ಲೆಕ್ಕಾಧಿಕಾರಿಗೆ ಇಲಾಖೆ ತನಿಖೆಯಲ್ಲಿ ಲೋಪ ಸಾಬೀತಾಗಿದ್ದು ಅವರಿಗೆ ಕಡ್ಡಾಯ ನಿವೃತ್ತಿ ಆದೇಶವಾಗಿದ್ದು, ತದನಂತರ ಅವರಿಂದ ಇಬ್ಬರು ಗ್ರಾಮ ಲೆಕ್ಕಾಧಿಕಾರಿಗಳಿಗೆ ಅನಧೀಕೃತವಾಗಿ ಬಿಡುಗಡೆ ಮಾಡಿದ ಸಂಬಳವನ್ನು ಅವರಿಂದ ಏಕೆ ಮರು ಪಾವತಿ ಮಾಡಬಾರದೆಂದು ನೀಡಿದ ನೋಟೀಸ್ ನಿ.ಡಿ–8 ರಿಂದ ವ್ಯಕ್ತವಾಗುತ್ತಿದೆ.

38. ಅದೇ ರೀತಿ ಇನ್ನೊಬ್ಬ ಸಿಬ್ಬಂದಿ ಮುಕ್ತಾಂಬ ಸಾಮಾಜಿಕ ಭದ್ರತಾ ಶಿರಸ್ತೆದಾರ, ತಾಲ್ಲೂಕು ಕಚೇರಿ ಬಂಗಾರಪೇಟೆ ಇವರು ಕೂಡಾ ದಿನಾಂಕ 01.02.2009 ರಿಂದ 09.12.2010 ರವರೆಗೆ ಸಂಬಳ ಬಟಾವಡೆ ಮಾಡುವ ವಿಷಯದಲ್ಲಿ ಕರ್ತವ್ಯ ಲೋಪವೆಸಗಿದ್ದು ಮತ್ತು ನಿವೃತ್ತಿ ವಯೋಮಿತಿ

ಮುಗಿದಿದ್ದರೂ ಸಹ ಅವರ ಸೇವೆ ಅವಧಿಯಿಂದ ನಿವೃತ್ತಿ ಹೊಂದಿದ್ದರೂ ಕೂಡಾ ಸಂಬಂಧಿತ ಕಡತವನ್ನು ಮೇಲಾಧಿಕಾರಿಗಳ ಮುಂದೆ ಮಂಡಿಸಬೇಕು. ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿದ್ದು ಮತ್ತು ಈ ಬಗ್ಗೆ ಇಲಾಖೆ ತನಿಖೆಯಲ್ಲಿ ತನಿಖಾ ಸಂಖ್ಯೆ ಆರ್‌ಡಿ 335 ಮತ್ತು ಎಂಎಎಸ್ 90 ರಲ್ಲಿ ನೋಂದಾವಣೆ ಮಾಡಿದ್ದು ನಿ.ಡಿ-10 ರಿಂದ ವ್ಯಕ್ತವಾಗುತ್ತಿದೆ.

39. ನಿ.ಡಿ-11 ರಲ್ಲಿ ಶಾಂತಮ್ಮ ಎನ್ನುವ ಪ್ರ.ದ.ಸ ಮುಳಬಾಗಿಲು ತಾಲ್ಲೂಕು ಕಚೇರಿಯಲ್ಲಿ ಕೂಡಾ ಇದೇ ಸ್ವರೂಪದ ಕರ್ತವ್ಯ ಲೋಪ ಮಾಡಿದ ಬಗ್ಗೆ ಇಲಾಖೆಯ ತನಿಖೆ ಸಂಖ್ಯೆ ಆರ್‌ಡಿ 335 ಮತ್ತು ಎಂಎಎಸ್ 90 ರಲ್ಲಿ ನೋಂದಾವಣೆ ಮಾಡಿದ್ದು ನಿ.ಡಿ-11 ರಿಂದ ವ್ಯಕ್ತವಾಗುತ್ತಿದೆ.

40. ನಿ.ಡಿ-12 ರಲ್ಲಿ ಇಲಾಖೆಯ ತನಿಖೆ ಸಂಖ್ಯೆ ಆರ್‌ಡಿ 335 ಮತ್ತು ಎಂಎಎಸ್ 90 ರಲ್ಲಿ ನೋಂದಾವಣೆ ಮಾಡಿದ್ದು ರಾಜಹೊನ್ನಮ್ಮ, ಅಂದಿನ ಗ್ರಾಮ ಲೆಕ್ಕಾಧಿಕಾರಿ ಮೇಲೆ ದಾಖಲು ಮಾಡಿದ್ದು ನಿ.ಡಿ-12 ರಿಂದ ವ್ಯಕ್ತವಾಗುತ್ತಿದೆ.

41. ಮೇಲಿನ ಎಲ್ಲಾ ನಿ.ಡಿ-1 ರಿಂದ ನಿ.ಡಿ-12 ರವರೆಗಿನ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಆಸನೌ ವಿಜಯಣ್ಣ ಅಂದಿನ ತಹಶೀಲ್ದಾರ ದಿ:11.05.2015 ರಂದು ಪ್ರಭಾರಿ ಪಡೆದ ನಂತರ ಸದರಿ ರಾಜಹೊನ್ನಮ್ಮ, ಗ್ರಾಮ ಲೆಕ್ಕಾಧಿಕಾರಿಗಳು ಸಂಬಂಧಿತವಾಗಿ ಸಹಕರಿಸಿದ ಇತರೆ ಕಂದಾಯ ಕಛೇರಿಯ ಸಿಬ್ಬಂದಿ ಮುಕ್ತಾಂಬ, ಶಾಂತಮ್ಮ ಇವರ ಮೇಲೆ ಕೂಡಾ ಕಠಿಣ ಇಲಾಖೆ ಕ್ರಮ ಜರುಗಿಸಿ ಇಲಾಖೆ ಸುತ್ತೋಲೆ ಸಂಖ್ಯೆ 335 ಎಂಎಎಸ್ 90 ನೋಂದಾಯಿಸಿ ಇಲಾಖೆ ತನಿಖೆ ಪ್ರಾರಂಭಿಸಿದ್ದು ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ.

42. ನಿ.ಡಿ-14 ಆಸನೌ ರವರು ತಹಶೀಲ್ದಾರ, ತಾಲ್ಲೂಕು ಕಚೇರಿ, ಕೋಲಾರ ಸರ್ಕಾರದ ಆದೇಶ ದಿನಾಂಕ 11.05.2015 ರಂದು ಪ್ರಭಾರಿ ಪಡೆದಿದ್ದು ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ.

43. ಅದೇ ರೀತಿ ದಿನಾಂಕ 15.09.2018 ರಂದು ಸರ್ಕಾರಿ ಆದೇಶದನ್ವಯ ಆಸನೌ ರವರು ವರ್ಗಾವಣೆ ಆಗಿ ದಿನಾಂಕ: 15.09.2018 ರಂದು ಪ್ರಭಾರಿ ವರ್ಗಾಯಿಸಿದ್ದು ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ.

44. ಆಸನೌ ಡಿಡಬ್ಲ್ಯೂ-1 ರವರ ಸಾಕ್ಷ್ಯ ಮತ್ತು ಅವರು ಹಾಜರು ಪಡಿಸಿದ ನಿಡಿ-1 ರಿಂದ ನಿ.ಡಿ-15 ರವೆಗಿನ ದಾಖಲೆಗಳನ್ನು ಕೂಲಂಕುಷವಾಗಿ ಗಮಿಸಿದಾಗ ಸದರಿಯವರು 2015 ರಲ್ಲಿ ತಹಶೀಲ್ದಾರರಾಗಿ ಕರ್ತವ್ಯ ಪದಾಗ್ರಹಣ ಮಾಡಿದ್ದು 2009 ರಿಂದ 2013ರ ಅವಧಿಯಲ್ಲಿ ಹನುಮಯ್ಯ ಮತ್ತು ನಂಜಪ್ಪ ಇವರಿಬ್ಬರು ವಯೋನಿವೃತ್ತಿ ಹೊಂದಿದ್ದರೂ 2017 ರವೆಗೆ ಸೇವಾ ಕಡತವನ್ನು ಸುಮಾರು 10-12 ತಹಶೀಲ್ದಾರರ ಮುಂದೆ ಮಂಡಿಸದೇ ಹನುಮಯ್ಯ ರವರಿಗೆ ರೂ.3,65,000/- ಮತ್ತು ನಂಜಪ್ಪ ರವರಿಗೆ ರೂ.3,62,000/- ಅನಧೀಕೃತ ಸಂಬಳ ಬಿಡುಗಡೆ ಮಾಡಿದ್ದನ್ನು ಕಡತಗಳಿಂದ ಬಹಿರಂಗ ಪಡಿಸಿ ಅವರ ಮೇಲಿನ ಕರ್ತವ್ಯ ಲೋಪಕ್ಕೆ ಸಹಕರಿಸಿದ

ಶ್ರೀಮತಿ ರಾಜಹೊನ್ನಮ್ಮ ಕೋಲಾರ ತಾಲ್ಲೂಕು ಕಚೇರಿಯ ವಿಷಯ ನಿರ್ವಾಹಕರು ಮತ್ತು ಅವರ ಸಹುದ್ಯೋಗಿ ಮುಕ್ತಾಂಬ ಮತ್ತು ಶಾಂತಮ್ಮ ಕಂದಾಯ ಅಧಿಕಾರಿಗಳ ಮೇಲೆ ಇಲಾಖೆ ತನಿಖೆಯನ್ನು ಮೇಲಾಧಿಕಾರಿಗಳಗೆ ಶಿಫಾರಸ್ಸು ಮಾಡಿ ಸ್ಥಾಪಿತ ಮಾಡಿದ್ದು ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ. ಸದರಿ ಇಬ್ಬರು ಹನುಮಯ್ಯ ರವರಿಗೆ ರೂ.3,65,000/- ಮತ್ತು ನಂಜಪ್ಪ ರವರಿಗೆ ರೂ.3,62,000/- ಅನಧೀಕೃತ ಸಂಬಳ ಬಿಡುಗಡೆ ಮಾಡಿದ ಸಮಯದಲ್ಲಿ ಆಸನೌ ರವರು ತಹಶೀಲ್ದಾರ ಕೋಲಾರ ತಾಲ್ಲೂಕು ಸ್ಥಾನದಲ್ಲಿ 2009-2013 ರವರೆಗೆ ಕಾರ್ಯ ನಿರ್ವಹಿಸುತ್ತಿದ್ದು ಬಗ್ಗೆ ಸೂಕ್ತ ದಾಖಲೆಗಳು ಕಂಡು ಬರುತ್ತಿಲ್ಲ.

45. ದಾಖಲೆಗಳ ಪರಿಶೀಲನೆಯಲ್ಲಿ ಪ್ರಸ್ತುತ ಆಸನೌ ವಿಜಯಣ್ಣ.ಎಂ ರವರು 2009 ರಿಂದ 2013 ರವರೆಗೆ ತಹಶೀಲ್ದಾರರಾಗಿ ಕರ್ತವ್ಯ ನಿರ್ವಹಿಸದ ಕಾರಣ ಅವರ ಕಾರ್ಯ ಅವಧಿಯಲ್ಲಿ ಮೇಲಿನ ಕರ್ತವ್ಯ ಲೋಪ ಆಗಿಲ್ಲ ಎಂದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಅದಲ್ಲದೇ ಸದರಿಯವರು ಪ್ರಭಾರಿ ಪಡೆದ ನಂತರ ಕರ್ತವ್ಯ ಲೋಪ ವೆಸಗಿದ ಕಂದಾಯ ಅಧಿಕಾರಿಗಳಾದ ರಾಜಹೊನ್ನಮ್ಮ ಕೋಲಾರ ತಾಲ್ಲೂಕು ಕಚೇರಿಯ ವಿಷಯ ನಿರ್ವಾಹಕರು ಮತ್ತು ಅವರ ಸಹುದ್ಯೋಗಿ ಮುಕ್ತಾಂಬ ಮತ್ತು ಶಾಂತಮ್ಮ ಕಂದಾಯ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಿ ರಾಜಹೊನ್ನಮ್ಮನವರನ್ನು ಸೇವೆಯಿಂದ ಅಮಾನತು ನೀಡುವ ಕ್ರಮ ಜರುಗಿಸಿದ್ದು ಕಂಡು ಬರುತ್ತಿದೆ ಮತ್ತು ಇವರ ಮೇಲೆ ಇಲಾಖೆ ಸಂಖ್ಯೆ ಆರ್‌ಡಿ 335 ಮತ್ತು ಎಂಎಎಸ್ 90 ರಲ್ಲಿ ದಾಖಲು ಮಾಡಿ ಕ್ರಮ ಜರುಗಿಸಿದ್ದು ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ.

46. ಸಂಕ್ಷಿಪ್ತವಾಗಿ ಪ್ರಾ.ಸ-1 ದೂರುದಾರರು ಎಓಸಿ ಆರೋಪಗಳಿಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದು, ಇವರನ್ನು ಪ್ರತಿಕೂಲ ಸಾಕ್ಷ್ಯವನ್ನಾಗಿ ಪರಿಗಣಿಸಿ ಅಭಿಯೋಕ್ತ ಮಂಡನಾಧಿಕಾರಿಗಳು ವಿವರವಾದ ಪಾಟೀ ಸವಾಲನ್ನು ಕೈಗೊಂಡಿದ್ದಾರೆ. ಪ್ರಾ.ಸ-1 ಇವರನ್ನು ಹೊರತುಪಡಿಸಿ ಬೇರೆ ಯಾವುದೇ ಸಾಕ್ಷಿದಾರರನ್ನು ಅಭೀಯೋಕ್ತ ಮಂಡನಾಧಿಕಾರಿಗಳು ಹಾಜರುಪಡಿಸಿಲ್ಲ. ಮೇಲೆ ಚರ್ಚೆ ಮಾಡಿದಂತೆ ಆಸನೌ ರವರು ಕರ್ತವ್ಯಲೋಪವೆಸಗಿದ ಅವಧಿ 2009-2013 ಅಥವಾ ನಂತರ 2014-17 ರವರೆಗೆ ಅನಧೀಕೃತ ಸಂಬಳ ಬಟಾವಡೆ ಮಾಡಿದ ಸಂದರ್ಭದಲ್ಲಿ ತಹಶೀಲ್ದಾರ ಕೋಲಾರ ತಾಲ್ಲೂಕು ಕಂದಾಯ ಕಚೇರಿಯಲ್ಲಿ ಕಾರ್ಯ ನಿರ್ವಹಿಸಿದ್ದು ಕಂಡು ಬರುತ್ತಿಲ್ಲ. ನಿ.ಡಿ-14 ನಿ.ಡಿ-15 ಪ್ರಕಾರ 2015-18 ರವೆಗೆ ತಹಶೀಲ್ದಾರರಾಗಿ ಕಾರ್ಯ ನಿರ್ವಹಿಸಿದ್ದು ವ್ಯಕ್ತವಾಗಿದ್ದು ಅಲ್ಲದೇ ಆಸನೌ ರವರೇ ಸದ್ಭಾವಣೆಯಿಂದ ದಕ್ಷತೆಯಿಂದ ಸಾಕ್ಷ್ಯಗಳನ್ನು ಕಲೆ ಹಾಕಿ ಸಂಬಂಧಿತ ಕರ್ತವ್ಯ ಲೋಪ ವೆಸಗಿದ ರಾಜಹೊನ್ನಮ್ಮ, ಮುಕ್ತಾಂಬ ಮತ್ತು ಶಾಂತಮ್ಮ ಇವರ ಮೇಲೆ ಇಲಾಖೆ ತನಿಖೆಯನ್ನು ಕೈಗೊಂಡು ಮತ್ತು ಹಣ ದುರ್ಬಳಕೆಯಾದ ರೂ.3,65,000/- ಮತ್ತು ರೂ.3,62,000/- ಹಣವನ್ನು

ಅನಧಿಕೃತವಾಗಿ ಹಣ ಸ್ವೀಕರಿಸಿದ ಹನುಮಯ್ಯ ಮತ್ತು ನಂಜಪ್ಪ ರವರ ಸರ್ಕಾರಿ ಆಸ್ತಿ ಕಂದಾಯ ವಸೂಲಾತಿ ರೂಪದಲ್ಲಿ ವಸೂಲಿ ಮಾಡಲು ಕ್ರಮ ಜರುಗಿಸಿದ್ದು ಕೂಡಾ ಕಂಡು ಬರುತ್ತಿದೆ.

47. ಮೇಲೆ ವಿವರಿಸಿದ ವಿವರವಾದ ಕಾರಣಗಳು ಮತ್ತು ವಿಸ್ತಾರವಾಗಿ ವಿವರಿಸಿದ ಚರ್ಚೆಯ ಆಧಾರದ ಅಡಿಯಲ್ಲಿ ಶಿಸ್ತು ಪ್ರಾಧಿಕಾರವು ಸದರಿ ಆಪಾದನೆಗಳನ್ನು (ಎಓಸಿ) ಸಾಬೀತುಪಡಿಸಲು ಸಂಪೂರ್ಣವಾಗಿ ವಿಫಲವಾಗಿದ್ದು ನಿರ್ಧಾರಕ್ಕೆ ಬರುತ್ತಿದೆ. ಮೇಲಿನ ಅಂಶ-1 ನ್ನು ನಕರಾತ್ಮಕವಾಗಿ ಉತ್ತರಿಸಲಾಗಿದೆ.

48. <u>ಅಂಶ-2:</u> **ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶ ಮಾಡಲಾಗಿದೆ**

**<u>:: ನಿರ್ಣಯ ::</u>**

49. ಆಸನೌ ಎಂ.ವಿಜಯಣ್ಣ ಅಂದಿನ ಕೋಲಾರ ಜಿಲ್ಲೆ ಮತ್ತು ತಾಲ್ಲೂಕು ತಹಶೀಲ್ದಾರ, ಪ್ರಸ್ತುತ ಹಾಲಿ ತಹಶೀಲ್ದಾರ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಎಓಸಿಯಲ್ಲಿ ಮಾಡಿದ ಕರ್ತವ್ಯ ಲೋಪ ಆರೋಪ ಮತ್ತು ಆಪಾದನೆಗಳನು ಶಿಸ್ತು ಪ್ರಾಧಿಕಾರದ ಮುಂದೆ ಸಾಬೀತುಪಡಿಸಲು ವಿಫಲವಾಗಿದೆ ಎಂದು ನಿರ್ಣಯಿಸಲಾಗಿದೆ.

50. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರವರಿಗೆ ಮುಚ್ಚಿದ ಲಕೋಟೆಯಲ್ಲಿ ಗೌರವ ಪರಿಗಣನೆಗೆ ಸಲ್ಲಿಸಲು ಕಛೇರಿಗೆ ಆದೇಶಿಸಲಾಗಿದೆ.

26/7/2021

(ರಾಜಶೇಖರ.ವಿ.ಪಾಟೀಲ)
ಅಪರ ನಿಬಂಧಕರು ವಿಚಾರಣೆಗಳು-7,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**KARNATAKA LOKAYUKTA**

NO: UPLOK-2/DE/346/2018/ARE-8

M.S.Building,
Dr. B.R. Ambedkar Veedhi,
Bengaluru - 560 001,
Date: 26.07.2022.

**NOTE**

Sub: Departmental Enquiry against;

1) Sri. Vijayanna, Tahasildar, Kolar Taluk and District - reg.

Ref: 1. G.O.No:RD 41 ADE 2018 Bengaluru, Dated: 22.03.2018

2. Nomination Order No: UPLOK-2/DE/346/ 2018/ARE-8 Bangalore dated: 13.07.2018 of Hon'ble Upalokayukta.

****

**INDEX**

| File No. | Particulars | | Page No. |
|---|---|---|---|
| File No.1 | Order Sheet file - original | | 1-19 |
| File No.2 | 1. 12(3) Report date: 12.01.2018 (xerox) | | 20-24 |
| | 2. Government Order date: 06/07/2018(xerox) | | 25-26 |
| | 3. Nomination Order date: 03/07/2018(xerox) | | 27-28 |
| | 4. Copy of Article of Charges date: 29.08.2018 served copy (original) | | 29-36 |
| | 5. FOS dated 05.11.2018 of DGO | | 37 |
| | 6. WS of DGO dated 28.01.2019. | | 38-42 |
| | 7. SOS of DGO dated 27.08.2021. | | 43 |
| | 8. Written argument of DGO dated 20.05.2022 | | 44-50 |
| File No.3 | **DEPOSITION OF DISCIPLINARY AUTHORITY** | | |
| | PW1 | Sri Manjunath Muniyappa, Karanjikatti, Kolar District | 51-52 |

| | | | |
|---|---|---|---|
| | **LIST OF DOCUMENTS MARKED ON BEHALF OF DISCIPLINARY AUTHORITY:** | | |
| File No.4 | Ex.P1 | Letter dated nil of complainant addressed to Hon'ble Upalokayukta. | 53-54 |
| | Ex.P2 | FORM NO.I (Complaint) | 55-56 |
| | Ex.P3 | FORM NO.II (Complainant's Affidavit) | 57 |
| | Ex.P5 | Circular dated 07.02.1991 (Xerox copy ) | 58 |
| | **DEPOSITION OF DELINQUENT GOVERNMENT OFFICIAL** | | |
| File No.5 | DW1 | Sri.M.Vijayanna, Tahasildar, Malavalli, Mandya District. | 59-69 |
| | **LIST OF DOCUMENTS MARKED ON BEHALF OF DELINQUENT GOVERNMENT OFFICIAL** | | |
| File No.6 | | List of Documents dated 27.08.2021. | 70-71 |
| | Ex.D1 | Reply of DGO dated 06.09.2017. (Xerox copy) | 72-73 |
| | Ex.D2 | Certified Copy of urgent O.M., dated 02.04.2017 of Tahasildar Kolar along with format. (attested) | 74-75 |
| | Ex.D3 | Certified Copy of Final Notice Dated 22.08.2017 of Tahasildar Kolar (attested). | 76-77 |
| | Ex.D4 | Certified Copy of SCN dated 18.05.2017 of Tahasildar Kolar (attested). | 78 |
| | Ex.D5 | Certified Copy of Memo dated 29.05.2017 of Tahasildar Kolar (attested). | 79 |

| | | | |
|---|---|---|---|
| | Ex.D6 | Certified Copy of SCN dated 18.05.2017 of Tahasildar Kolar (attested). | 80 |
| | Ex.D7 | Certified Copy of Final Notice dated 22.08.2017 of Tahasildar Kolar (attested). | 81 |
| | Ex.D8 | Certified Copy of SCN dated 04.05.2017 of Tahasildar Kolar (attested). | 82 |
| | Ex.D9 | Certified Copy of order dated 08.06.2017 D.C., Kolar(attested). | 83-84 |
| | Ex.D10 | Certified Copy of charge sheet issued to Smt Muktamba (attested). | 85-87 |
| | Ex.D11 | Certified Copy of charge sheet issued to Smt Shantamma (attested). | 88-90 |
| | Ex.D12 | Certified Copy of charge sheet issued to Smt Honnarajamma(attested). | 91-93 |
| | Ex.D13 | Letter dated 23.05.2017 of Tahasildar Kolar (attested). | 94-95 |
| | Ex.D14 | Certified Copy of CTC dated 11.05.2015 of DGO | 96-97 |
| | Ex.D14 | Certified Copy of CTC dated 15.09.2018 of DGO | 98-99 |

Receipt of the above report and original records may kindly be acknowledged.

26/7/2022

(RAJASHEKAR.V.PATIL)
Additional Registrar Enquiries-8
Karnataka Lokayukta,
Bengaluru.

To:
The Hon'ble Upalokayukta-2,
Karnataka Lokayukta,
Bengaluru.

Date of retirement of DGO: 30.11.2025

## GOVERNMENT OF KARNATAKA

## KARNATAKA LOKAYUKTA

No.UPLOK-2/DE/346/2018/ARE-8

Multi Storied Building,
Dr. B.R. Ambedkar Veedhi,
Bengaluru-560001
Date: 29th July, 2022.

# RECOMMENDATION

Sub: Departmental Inquiry against Shri Vijayanna, Tahsildar, Kolar Taluk and District-reg.,

Ref: 1) Government Order No.ಆರ್‌ಡಿ 41 ಎಡಿಇ 2018, Bengaluru, dated: 06/07/2018.

2) Nomination Order No.UPLOK-2/DE/346/2018, Bengaluru, dated: 13/07/2018 of Upalokayukta, State of Karnataka, Bengaluru.

3) Inquiry Report dated: 26/07/2022 of Additional Registrar of Enquiries-8, Karnataka Lokayukta, Bengaluru.

*****

The Government by its order dated: 06/07/2018 initiated the disciplinary proceedings against Shri Vijayanna, Tahsildar, Kolar Taluk and District (hereinafter referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No. UPLOK-2/DE/346/2018, Bengaluru, dated: 13/07/2018 nominated Additional Registrar of Enquiries-8, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him.

3. The DGO, Shri Vijayanna, Tahsildar, Kolar Taluk and District was tried for the following charges:

**ಅನುಬಂಧ–1**

**ದೋಷಾರೋಪಣೆ:**

ಆಪಾದಿತ ಸರ್ಕಾರಿ ನೌಕರರು ಆದ ನೀವು ಕೋಲಾರ ತಾಲ್ಲೂಕಿನಲ್ಲಿ ತಹಸೀಲ್ದಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಕೋಲಾರ ತಾಲ್ಲೂಕಿನ ಗ್ರಾಮ ಸಹಾಯಕರಾದ ಶ್ರೀ ಬಿ.ಮುನಿಹನುಮಯ್ಯ ಮತ್ತು ನಂಜಪ್ಪ ಎಂಬುವರನ್ನು ವಯೋ ನಿವೃತ್ತಿ 65 ವರ್ಷ ಕಳೆದರೂ ಹುದ್ದೆಯಿಂದ ತೆಗೆದು ಹಾಕದೇ, 70 ವರ್ಷಗಳಾದರೂ ಅವರಿಗೆ ಅಕ್ರಮವಾಗಿ ರೂ.3,65,000/– ಮತ್ತು ರೂ.3,62,000/– ವೇತನ ಬಟವಾಡೆ ಮಾಡಿ, ಕರ್ನಾಟಕ ಸರ್ಕರದ ಸುತ್ತೋಲೆಯ ಸಂ.ಆರ್.ಡಿ.335 ಎಂ.ಎ.ಎಸ್.1990ರಂತೆ ಅನುಸರಣಾ ವರದಿಯನ್ನು ಸಲ್ಲಿಸದೇ, ಆಪಾದಿತ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ನೀವು ಕರ್ನಾಟಕ ಸರ್ಕಾರಿ ಸೇವಾ (ಸದ್ವರ್ತನೆ) ನಿಯಮಾವಳಿ 1966ರ (3)(i) ರಿಂದ (iii)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

4. The Inquiry Officer (Additional Registrar of Enquiries-8) on proper appreciation of oral and documentary evidence has held that, the Disciplinary Authority has 'Not Proved' the charges leveled against the DGO, Shri Vijayanna, Tahsildar, Kolar Taluk and District.

5. On perusal of the Inquiry Report, in order to prove the guilt of the DGO, the Disciplinary Authority has examined one witness i.e., PW-1 and Ex. P-1 and P-4 documents were marked. In fact, DGO was also examined himself as DW-1 and Ex. D-1 and D-14 documents were marked.

6. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer and to exonerate DGO, Shri Vijayanna, Tahsildar, Kolar Taluk and District, of the charges leveled against him.

7. Action taken in the matter shall be intimated to this Authority.

Connected records are enclosed herewith.

29/7/22

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.